ಫಲಾನುಭವಿಗಳ ಆಯ್ಕೆ ಕೂಡ ಆಗುತ್ತದೆ.ಚೆಕ್ ವಿತರಣೆ ಆಗುತ್ತದೆ. ಪ್ರತಿಯೊಂದು ಪ್ರಕ್ರಿಯೆಗಳು ನಡೆಯುತ್ತಿವೆ. ಶಾಸಕರನ್ನು . ಸುಮ್ಮನೆ ನಾಮಕಾವಾಸ್ಥೆಗೆ ಇಟ್ಟುಕೊಂಡಿದ್ದಾರೆ. ಬಹಳ ತಾರತಮ್ಯವಾಗುತ್ತಿದೆ. ದಯವಿಟ್ಟು ಶಾಸಕರ ಗೌರವ, ಮಾನವನ್ನು ಕಾಪಾಡಿ ಎಂದು ಕೇಳುತ್ತಿರುವುದು.

4) ವಿಷಯ: ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಮಾನ್ಯ ಶಾಸಕರಾದ ಶ್ರೀ ಎ.ಎಸ್.ಪಾಟೀಲ್‌ರವರು hunger strikeಮಾಡುತ್ತಿರುವ ಬಗ್ಗೆ.

ಡಾ.ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್(ಸೇಡಂ): ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರಾದ ಶ್ರೀ ಎ.ಎಸ್.ಪಾಟೀಲ್‌ರವರು ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನಲ್ಲಿ hunger strike ಮಾಡುತ್ತಿದ್ದಾರೆ. ಬಿಜಾಪುರ ತಾಲ್ಲೂಕಿನಲ್ಲಿ ಭೀಕರ ಬರಗಾಲ ಇದೆ, ಇಡೀ ರಾಜ್ಯದಲ್ಲೇ ಬರಗಾಲವಿದೆ. ಮೊನ್ನೆ ಸುಮಾರು 20,000 ಜನ ಸೇರಿದ್ದರು. ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಬಂಡಿಯಾತ್ರೆ ಮಾಡಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಸರ್ಕಾರ ಅದರ ಬಗ್ಗೆ ಏನಾದರೂ ಅಲ್ಲಿ ಹೋಗಿ ಅವರ ಜೊತೆ ಮಾತನಾಡಿ ಅವರದೇನು demandsಇದೆ, ಅದರ ಬಗ್ಗೆ considerಮಾಡಬೇಕೆಂದು ತಮ್ಮಲ್ಲಿ ಒತ್ತಾಯ ಮಾಡುತ್ತಿದ್ದೇನೆ.ಏಕೆಂದರೆ ಈ ಸದನದ ಒಬ್ಬ ಸದಸ್ಯರು ಇಲ್ಲಿ ಸದನ ನಡೆದಾಗ ಅಲ್ಲಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆಂದು ಅದರ ತೀವ್ರತೆ ಎಷ್ಟಿದೆ ಎಂಬುದನ್ನು ತೋರಿಸುತ್ತದೆ. ಅದಕ್ಕೆ ದಯವಿಟ್ಟು ಸರ್ಕಾರ ಈ ಬಗ್ಗೆ ಪ್ರತಿಕ್ರಿಯೆ ಕೊಡಬೇಕು ಮತ್ತು ಅಲ್ಲಿ ಉಪವಾಸ ಸತ್ಯಾಗ್ರಹ ಮಾಡುತ್ತಿರುವ ಶಾಸಕರ ಬಳಿಗೆ ಹೋಗಿ ಅವರೊಂದಿಗೆ ಮಾತುಕತೆ ಆಡಿ ಅವರ ಬೇಡಿಕೆಗಳೆಲ್ಲವನ್ನೂ ಪೂರೈಸಬೇಕೆಂಬುದು ನಮ್ಮೆಲ್ಲಾ ಶಾಸಕರ ಒತ್ತಾಯ ಇದೆ. ಅವರೇನು ಪರಿಹಾರ ಕೇಳುತ್ತಿದ್ದಾರೆ ಅದನ್ನು ಈ ತತ್‌ಕ್ಷಣ ಸರ್ಕಾರ ಹೋಗಿ ಕೊಡಬೇಕು.

ಶ್ರೀ ಕೃಷ್ಣಬೈರೇಗೌಡ: ಮಾನ್ಯ ಅಧ್ಯಕ್ಷರೆ, ನಮ್ಮೆಲ್ಲರದೂ ಇದೆ. ಹೆಚ್ಚಿಗೆ ಮಾತನಾಡಲಾಗುತ್ತಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ(ಉಪ ಮುಖ್ಯಮಂತ್ರಿಗಳು): ಈಗಾಗಲೇ ಬರಗಾಲದ ಬಗ್ಗೆ ಚರ್ಚೆಯಾಗುತ್ತದೆ ಎಂಬುದನ್ನು ತಾವು ಗಮನಿಸಿದ್ದೀರಿ. ವಿಶೇಷವಾಗಿ ಮುದ್ದೇಬಿಹಾಳದಲ್ಲಿ ನಮ್ಮ ಗೌರವಾನ್ವಿತ ಶಾಸಕರು ಅಲ್ಲಿ ಆ ಭಾಗದ ಬರಗಾಲದ ಬಗ್ಗೆ ಉಪವಾಸ ಕುಳಿತಿರುವಂಥ ಅಂಶವನ್ನು ಕೂಡ ಈಗೇನು ಪ್ರಸ್ತಾಪವಾಗಿದೆ. ಖಂಡಿತ ನಾನು ಇಲ್ಲಿಂದಲೇ ಅವರಲ್ಲಿ ಮನವಿ ಮಾಡುತ್ತೇನೆ. ಏಕೆಂದರೆ ವಿಧಾನಸಭೆ ಅಧಿವೇಶನ ನಡೆಯುತ್ತಿರುವಂಥ ಸಂದರ್ಭದಲ್ಲಿ ನಾವು ಯಾರೂ ತಕ್ಷಣ ಅಲ್ಲಿಗೆ ಹೋಗಿ ಅವರಿಗೆ ಸಮಾಧಾನ ಮಾಡಿ ಅವರನ್ನು ಕರೆದುಕೊಂಡು

ಬರುವಂಥ ಸ್ಥಿತಿ ಇವತ್ತಿಲ್ಲ. ಆದರೂ ಕೂಡ ನಮ್ಮ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ಅವರೇನು ಇವತ್ತು ಧರಣಿ, ಉಪವಾಸ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ ಅದನ್ನು ವಾಪಸ್ ತೆಗೆದುಕೊಳ್ಳುವಲ್ಲಿ ಎನ್ನುವಂತಹ ಮಾತನ್ನು ಮುದ್ದೇಬಿಹಾಳದಲ್ಲಿ ಏನೇನು ಬರಗಾಲ ಪರಿಸ್ಥಿತಿ ಇದೆ. ಅಲ್ಲಿ ಕುಡಿಯುವ ನೀರಿನ ಬಗ್ಗೆ ಇರಬಹುದು, ಮೇವಿನ ಬಗ್ಗೆ ಇರಬಹುದು, ಉದ್ಯೋಗ ಖಾತ್ರಿ ಮನವಿ ಇರಬಹುದು, ಏನೇನು ಅನುಕೂಲಗಳನ್ನು ನಾವು ಮಾಡಲಿಕ್ಕೆ ಸಾಧ್ಯವೋ ಖಂಡಿತ ಮಾಡುತ್ತೇವೆಂಬ ಅಂಶವನ್ನು ಮಾನ್ಯ ಅಧ್ಯಕ್ಷರೆ ನಾವು ತಮ್ಮ ಮೂಲಕ ಹೇಳಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಅಪ್ಪಾಜಿ ಎಸ್.ನಾಡಗೌಡ (ಮುದ್ದೇಬಿಹಾಳ): ಸನ್ಮಾನ್ಯ ಅಧ್ಯಕ್ಷರೆ, ನಾನು ಮುದ್ದೇಬಿಹಾಳದ ಶಾಸಕ. ಬರಗಾಲದ ಬಗ್ಗೆ taskforce committeeಯಿಂದ ಏನೆಲ್ಲಾ ಮುಂಜಾಗ್ರತೆ ಕ್ರಮವನ್ನು ಕೈಗೊಳ್ಳಬೇಕೋ ಅದನ್ನು ನಾವು ಕೈಗೊಂಡಿದ್ದೇವೆ. ಸರ್ಕಾರದ ಕಡೆಯಿಂದ ಒಂದಿಷ್ಟು ಹಣ ಬರಬೇಕಾಗಿದೆ. ಅದರ ಕೊರತೆ ಇದೆ.District minister ಈ ಬಗ್ಗೆ review meeting ಮಾಡಿದಾಗ ಏನು ಹಣ ಬಿಡುಗಡೆ ಆಗಬೇಕು ಎಂಬ ಬಗ್ಗೆ ಕೂಡ ಸರ್ಕಾರಕ್ಕೆ ನಾವು ಡಿ.ಸಿ.ಮೂಲಕ ಕಳುಹಿಸಿಕೊಟ್ಟಿದ್ದೇವೆ. ಅದಕ್ಕೆ ಹಣವನ್ನು ಪಡೆಯುವಂಥ ಪ್ರಯತ್ನ ಕೂಡ ಆಗುತ್ತಿದೆ. ಆದರೆ ನಮ್ಮ ಶಾಸಕ ಮಿತ್ರರಿಗೂ ಕೂಡ ಒಂದು ಮಾತನ್ನು ಹೇಳುತ್ತೇನೆ. ನಾವು ಇಲ್ಲಿ ಸದನದ ಸದಸ್ಯರಾಗಿದ್ದೇವೆ. ಸದನ ನಡೆಯುವಾಗ ನಾವು ಏನು ಬೇಡಿಕೆಗಳಿವೆ ಅದನ್ನೆಲ್ಲಾ ಇಲ್ಲಿ ಇಡೋಣ. ಸರ್ಕಾರಕ್ಕೆ ಮುಜುಗರ ಮಾಡೋಣ, ಒತ್ತಾಯ ಮಾಡೋಣ ಅಥವಾ ಮಾಡುವ ಹಾಗಿದ್ದರೆ ಅವರು ತಮ್ಮ ಮತಕ್ಷೇತ್ರದಲ್ಲಿ ಹೋಗಿ ಧರಣಿ ಮಾಡಲಿ. ಮುದ್ದೇಬಿಹಾಳದಲ್ಲಿ ಮಾಡತಕ್ಕಂಥ ಅವಶ್ಯಕತೆ ಅವರಿಗಿರಲಿಲ್ಲ. ದಯವಿಟ್ಟು ಈ ರಾಜಕೀಯ ತಂತ್ರಗಳನ್ನು, ರಾಜಕೀಯ ಉದ್ದೇಶಗಳನ್ನು ನಿಲ್ಲಿಸದಿದ್ದರೆ ಶಾಸಕರಿಗೆ ಯಾರಿಗೂ ಗೌರವ ಬರುವುದಿಲ್ಲ. ಪ್ರಾಮಾಣಿಕವಾಗಿ ಯಾರು ಕೆಲಸ ಮಾಡುತ್ತಾರೆ ಅವರಿಗೆ ಒಂದು ಕಳಂಕ ತರುವಂಥದ್ದು, ಚ್ಯುತಿ ತರುವಂಥ ಕಾರ್ಯ ನಡೆಯುತ್ತಿದೆ. ಇದು ಖಂಡನೀಯವಾದುದು ಎಂದು ನಾನು ಈ ಸಂದರ್ಭದಲ್ಲಿ ಬಹಳ ಸ್ಪಷ್ಟಪಡಿಸುತ್ತೇನೆ.

ಶ್ರೀ ಶ್ರೀಕಾಂತ ಎಸ್.ಕುಲಕರ್ಣಿ(ಜಮಖಂಡಿ): ಮಾನ್ಯ ಅಧ್ಯಕ್ಷರೆ, ಮಾನ್ಯ ನಾಡಗೌಡರು ಇಲ್ಲಿ ಹೇಳಿದ ವಿಷಯಕ್ಕೆ ನಾನು ಬೆಂಬಲಿಸುತ್ತೇನೆ. ಇಲ್ಲಿ ರೈತರ ಪರವಾಗಿ ಚರ್ಚೆ, ಬರಗಾಲದ ಬಗ್ಗೆ ಸರ್ಕಾರ ತೆಗೆದುಕೊಳ್ಳುವಂಥ ನಿರ್ಣಯಗಳ ಬಗ್ಗೆ ಚರ್ಚೆ, ರೈತರ ಸಾವು ನೋವುಗಳ ಬಗ್ಗೆ ಚರ್ಚೆ ನಡೆದಾಗ ಜಮಖಂಡಿಯಲ್ಲಿ ಕೂಡ ಕೆಲವರು ರಾಜಕೀಯ ಮಾಡುವಂಥ ಉದ್ದೇಶದಿಂದ

ಧರಣಿ ಕುಳಿತಿದ್ದಾರೆ. ಅದು ಸರಿಯಲ್ಲ. ಇಲ್ಲಿ ಚರ್ಚೆಯಾಗಿ ಸರ್ಕಾರ ನಿರ್ಣಯ ಮಾಡುತ್ತದೆಂಬ ಭಾವನೆ ಅವರಿಗೆ ಗೊತ್ತಾಗಲಿ ಎಂದು ನಾನು ತಮ್ಮ ಮೂಲಕ ಕೇಳಬಯಸುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ(ಉಪಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಮಾನ್ಯ ಮುದ್ದೇಬಿಹಾಳದ ಶಾಸಕರು ಈಗ ಪ್ರಸ್ತಾಪ ಮಾಡಿದ್ದಾರೆ. ಈ ಮುದ್ದೇಬಿಹಾಳದಲ್ಲಿ ಅಲ್ಲಿಯ ಒಬ್ಬ ಕಾಂಗ್ರೇಸ್ ಶಾಸಕರು ಧರಣಿ ಕುಳಿತಿದ್ದಾರೆಂಬ ಅಂಶವನ್ನು, ಬಂಡಿಯಾತ್ರೆ ಮಾಡುತ್ತಿದ್ದಾರೆಂದು ಇನ್ನೂ ಹಲವು ಕಾಂಗ್ರೆಸ್ ಶಾಸಕರು ಪ್ರಸ್ತಾಪ ಮಾಡಿ ಅದಕ್ಕೆ ಇನ್ನೂ ಅನೇಕ ಕಾಂಗ್ರೆಸ್ ಪಕ್ಷದ ಶಾಸಕರು ಬೆಂಬಲವನ್ನು ವ್ಯಕ್ತಪಡಿಸಿದ್ದಾರೆ. ಮುದ್ದೇಬಿಹಾಳದ ಶಾಸಕರು ಕೂಡ ಕಾಂಗ್ರೆಸ್‌ನವರಾಗಿದ್ದಾರೆ, ತಾವೂ ಕೂಡ ಕಾಂಗ್ರೆಸ್ ಶಾಸಕರಗಿದ್ದೀರಿ.ಇಲ್ಲಿ ಅವರು ಪ್ರಸ್ತಾಪ ಮಾಡುತ್ತಿದ್ದಾರೆ. ದಯವಿಟ್ಟು ಇದರಲ್ಲಿ ರಾಜಕಾರಣ ಮಾಡಬಾರದು ಎಂದು ಅಲ್ಲಿನ ಶಾಸಕರು ಮಾತನಾಡುತ್ತಿದ್ದಾರೆ. ಅದಕ್ಕೋಸ್ಕರ ನಾನು ಬರಗಾಲದ ವಿಚಾರ ಬಂದಂಥ ಸಂದರ್ಭದಲ್ಲಿ ಪ್ರಾರಂಭದಲ್ಲೇ ಹೇಳಿದ್ದೇನೆ. ನಿನ್ನೆ ತುಮಕೂರಿಗೆ ಹೋಗಿದ್ದೆ. ಮಾನ್ಯ ವಿರೋಧ ಪಕ್ಷದ ಉಪನಾಯಕರು ನಮ್ಮ ಜೊತೆಯಲ್ಲಿದ್ದರು. ಅಲ್ಲಿ ಕೂಡ ನಾವೆಲ್ಲಾ ಪಕ್ಷಭೇದ ಮರೆತು ರಾಜಕಾರಣ ಬಿಟ್ಟು ಅಲ್ಲೆಲ್ಲಾ ತನಿಖೆ ಮಾಡಿ, ವರದಿಯನ್ನು ಸಂಗ್ರಹ ಮಾಡಿ ಅಲ್ಲಿ ಏನೇನು ಅನುಕೂಲಗಳು ಬೇಕು ಅದೂ ಕೂಡ ಅಲ್ಲಿ ಮಾಡುತ್ತಿದ್ದೇವೆ. ಅದೇ ರೀತಿ ನಿನ್ನೆ ಚಿತ್ರದುರ್ಗಕ್ಕೆ ಹೋಗಿದ್ದೆ. ನಾನು ಎಲ್ಲಾ ಶಾಸಕರಲ್ಲಿಯೂ ಪ್ರಾರ್ಥನೆ ಮಾಡುವುದು ಇಷ್ಟೆ. ಕೇವಲ ಶಾಸಕರಲ್ಲಷ್ಟೇ ಅಲ್ಲ, ಎಲ್ಲ ರಾಜಕೀಯ ಪಕ್ಷದ ಎಲ್ಲಾ ಸಂಘ ಸಂಸ್ಥೆಗಳನ್ನು ನಾನು ಪ್ರಾರ್ಥನೆ ಮಾಡುತ್ತೇನೆ. ಬರಗಾಲದ ವಿಚಾರದಲ್ಲಿ ದಯವಿಟ್ಟು ಯಾರೂ ರಾಜಕಾರಣ ಮಾಡಬೇಡಿ. ನನಗೆ ಪ್ರಸ್ತಾಪ ಮಾಡಲಿಕ್ಕೆ ಬಿಡಿ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಸರ್, ಇದು ರಾಜಕೀಯ ಅಲ್ಲ, ಬಿಜಾಪುರ ಜಿಲ್ಲೆಯ ಆ ಭಾಗದಲ್ಲಿ ಬರಗಾಲ ಬಿದ್ದಿದೆ ಎಂದು protestಮಾಡುವುದನ್ನು ರಾಜಕೀಯ ಎಂದು ನಾನಂತೂ ಅಂದುಕೊಳ್ಳುವುದಿಲ್ಲ.

ಶ್ರೀ ಅಪ್ಪಾಜಿ ಎಸ್.ನಾಡಗೌಡ : ಶರಣ ಪ್ರಕಾಶ್ ರವರೆ, ಅವರು ತಮ್ಮ ಮತಕ್ಷೇತ್ರದಲ್ಲಿ ಧರಣಿ ಮಾಡಲಿ,

(ಗೊಂದಲ)

ಡಾ: ಶರಣ್ ಪ್ರಕಾರ್ಶ ರುದ್ರಪ್ಪ ಪಾಟೀಲ್ : ಇದಕ್ಕೆ ರಾಜಕೀಯ ಬಣ್ಣ ಬಳಿಯುವಂತಹ ಅವಶ್ಯಕತೆ ಇಲ್ಲ. ಇವತ್ತು ಇಡೀ ರಾಜ್ಯ ಬರಗಾಲದಲ್ಲಿದೆ. ಇದಕ್ಕೆ ದಯವಿಟ್ಟು ಯಾರೂ ರಾಜಕೀಯ ಬಣ್ಣ ಬಳಿಯಬಾರದು. ಜನರ, ರೈತರ

ಸಮಸ್ಯೆಯನ್ನು ಎತ್ತಿಹಿಡಿಯುವಂಥದ್ದು ಶಾಸಕರ, ಜನಪ್ರತಿನಿಧಿಗಳ ಕರ್ತವ್ಯ, ಅವರು ಕರ್ತವ್ಯ ನಿರ್ವಹಣೆ ಮಾಡುತ್ತಿದ್ದಾರೆ.

ಅಧ್ಯಕ್ಷರು : ಆಯಿತು, ಕುಳಿತುಕೊಳ್ಳಿ.

ಶ್ರೀ ಅಪ್ಪಾಜಿ ಎಸ್.ನಾಡಗೌಡ :Dr. Sharan Prakashji, I differ with you.ದಯವಿಟ್ಟು ತಮಗೆ ಗೊತ್ತಿರಲಾರದ ವಿಷಯದ ಬಗ್ಗೆ ಹೆಚ್ಚು ಪ್ರಸ್ತಾಪ ಬೇಡ. ನಮ್ಮ ಪಕ್ಷದ ವೇದಿಕೆ ಮೇಲೆ ಚರ್ಚೆ ಮಾಡೋಣ. ದಯವಿಟ್ಟು ಸದನದಲ್ಲಿ ಇನ್ನೊಬ್ಬ ಸದಸ್ಯನಿಗೆ ಚ್ಯುತಿ ಬರುವಂತೆ ನೀವು ಮಾತನಾಡಬೇಡಿ. ನಾನು ನಾಲ್ಕು ಸಲ ಶಾಸಕನಾಗಿ ಆಯ್ಕೆಯಾಗಿ ಬಂದಿದ್ದೇನೆ. ನಾನು ಇಲ್ಲಿ ಮಸಾಲೆ ಅರೆಯಲಿಕ್ಕೆ ಬಂದಿಲ್ಲ.

ಅಧ್ಯಕ್ಷರು : ಈ ವಿಚಾರದ ಬಗ್ಗೆ ಈಗ ಪ್ರಸ್ತಾಪ ಬೇಡ.

ಶ್ರೀ ಟಿ.ಬಿ.ಜಯಚಂದ್ರ: ಈ ವಿಚಾರ ಪ್ರಸ್ತಾಪ ಬೇಡ. ಬೇರೆ ವಿಚಾರಕ್ಕೆ ಹೋಗೋಣ.

ಅಧ್ಯಕ್ಷರು : ಈಗ ಶ್ರೀ ಈಶ್ವರ್ ಭೀಮಣ್ಣ ಖಂಡ್ರೆಯವರು.

5. ವಿಷಯ : ಮಹಾರಾಷ್ಟ್ರದ ಗಡಿಭಾಗದಲ್ಲಿರುವ 22 ಹಳ್ಳಿಗಳನ್ನು ರಕ್ಷಣೆ ಮಾಡುವ ಬಗ್ಗೆ.

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) :ಮಾನ್ಯ ಅಧ್ಯಕ್ಷರೆ, ನನ್ನ ಮತಕ್ಷೇತ್ರ ಬೀದರ್ ಜಿಲ್ಲೆಯ ಭಾಲ್ಕಿಯಲ್ಲಿ ಈ ವರ್ಷ ಮಳೆಯಾಗಿದೆ. ಈ ವರ್ಷ ಎಲ್ಲಾ ಕಡೆ ಮಳೆಯಾಗದಿದ್ದರೂ ಬೀದರ್‌ನಲ್ಲಿ ಮಳೆಯಾಗಿದೆ. ಮತ್ತೆ ನನ್ನ ಪಕ್ಕದಲ್ಲಿರುವ ಮಹಾರಾಷ್ಟ್ರದಲ್ಲಿ ಕೂಡ ಮಳೆ ಸ್ವಲ್ಪ ಸ್ವಲ್ಪ ಸುರಿಯುತ್ತಿದೆ. ಯಾವ ಮಳೆಗಾಲದಲ್ಲಿ ಗಡಿಭಾಗದಲ್ಲಿರುವಂಥ 22 ಹಳ್ಳಿಗಳು ಸೈಗಾಂವ್ ಬ್ರಿಡ್ಜ್, ಕೊಂಗಲಿ ಬ್ರಿಡ್ಜ್, ಹಲಸಿತೂಗ ಬ್ರಿಡ್ಜ್ ಬಹಳ ಅತ್ಯಂತ ಕಿರಿದಾದ ಬ್ರಿಡ್ಜ್‌ಗಳಿವೆ, ಆ ಬೆಲೆಗಾಂವ್ ಜಲಾಶಯದಿಂದ ನೀರು ಮಹಾರಾಷ್ಟ್ರದವರು ಬಿಟ್ಟ ತಕ್ಷಣ ಈ ಬ್ರಿಡ್ಜ್‌ಗಳ ಮೇಲೆ 8–8, 10–10 ಅಡಿಗಳಷ್ಟು ನೀರು ಸುರಿದು, ನೀರು ಮೇಲೆ ಬಂದು ಗಡಿಭಾಗದಲ್ಲಿ 22 ಗ್ರಾಮಗಳ ಮರಾಠಿ ಭಾಷಿಕರು ಅದರಲ್ಲಿರುವಂಥ 40 ಸಾವಿರ ಜನರು ಹೊರ ಜಗತ್ತಿನಿಂದ ಸಂಪರ್ಕ ಕಡಿದುಕೊಳ್ಳುತ್ತಿದ್ದಾರೆ. ಪ್ರತಿವರ್ಷ ಸದನದಲ್ಲಿ ಈ ವಿಷಯವನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಸನ್ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಿದ್ದಾಗ ಅವರು ಬಂಧು ವಾಗ್ದಾನ ಮಾಡಿದರು, ತಕ್ಷಣ ಮಾಡುತ್ತೇವೆಂದು ಹೇಳಿದರು. ಶ್ರೀ ಸದಾನಂದಗೌಡರು ಮುಖ್ಯಮಂತ್ರಿಗಳಾಗಿದ್ದಾಗ ಕೂಡ ಮಾಡುತ್ತೇವೆಂದು ಹೇಳಿದರು. ದಯವಿಟ್ಟು